**ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ,**
**ಬಸವನ ಬಾಗೇವಾಡಿ.**

ಸಿಸಿ ನಂಃ 450/2015

ಸಿಡಬ್ಲುಃ 1 ಪಿಡಬ್ಲುಃ 2

| | | |
|---|---|---|
| ಸಾಕ್ಷಿದಾರರ ಹೆಸರು | ಸಗರಪ್ಪ | |
| ತಂದೆ/ಗಂಡನ ಹೆಸರು | ಚಂದ್ರುಮಪ್ಪ ಗಡೇದ | |
| ವಯಸ್ಸು | 60 | ವರ್ಷ |
| ಉದ್ಯೋಗ | ಒಕ್ಕಲುತನ | |
| ವಾಸಸ್ಥಳ | ಕವಲಗಿ | |

**ಸಾಕ್ಷಿಯನ್ನು ಇಂದು ದಿನಾಂಕಃ 18.04.2024 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

ಚಾಸಾ-4 ನನ್ನ ಹೆಂಡತಿ. ಚಾಸಾ-5 ನನ್ನ ಮಗಳು. ಚಾಸಾ-6 ಮತ್ತು 7 ನನ್ನಗೆ ಪರಿಚಯದವರು. ಕವಲಗಿ ಗ್ರಾಮದಲ್ಲಿ ನಮ್ಮದು ಒಂದು ಖೂಲ್ಲಾ ಜಾಗ ಇತ್ತು. ನಂತರ ಆರೋಪಿತರು ಸದರಿ ಜಾಗೆಯನ್ನು ತಮ್ಮದು ಎಂದ ಕಾರಣ ಅವರ ಮೇಲೆ ನಾನು ಸಿವಿಲ್ ದಾವೆಯನ್ನು ಹೂಡಿದ್ದೆ. ದಿನಾಂಕ:16.12.2014 ರಂದು ಸದರಿ ಆರೋಪಿತರು ಸಾಯಂಕಾಲ 6.30 ಗಂಟೆಗೆ ನಮ್ಮ ಮನೆಗೆ ಬಂದು ಸಿವಿಲ್ ದಾವೆಯನ್ನು ಯಾಕೆ ಹೂಡಿದ್ದೀರಿ ಎಂದು ಜಗಳ ತೆಗೆದರು. 1 ನೇ ಆರೋಪಿತರ ಜೊತೆಗೆ ದುಂಡಪ್ಪ ಹಣಮಂತ ಪೂಜಾರಿ, ಮುದ್ದಪ್ಪ ಪೂಜಾರಿ, ಬಸವ್ವ ಪೂಜಾರಿ, ಕಾಶೀಬಾಯಿ ಪೂಜಾರಿ, ಸಾವಿತ್ರಿ ಪೂಜಾರಿ, ರಂಗಪ್ಪ ಶಿವಪ್ಪ ಪೂಜಾರಿ, ಪ್ರಕಾಶ ನಿಡಗುಂದಿ, ಯಲ್ಲಪ್ಪ ಗಡೇದ, ಸುಸಲವ್ವ ಗಡೇದ, ಶ್ರೀಶೈಲಗೌಡ ಪಾಟೀಲ, ರಾಜುಗೌಡ ಪಾಟೀಲ, ಮತ್ತು ಬಸನಗೌಡ ಪಾಟೀಲ ಎಲ್ಲರೂ ಸೇರಿ ನನಗೆ ಅವಾಚ್ಯವಾಗಿ ಬೈದು ಮನೆಯಿಂದ ಹೊರಗೆ ಕರೆದುರಿತ್ತಾರೆ. ನಾನು ಏಕೆ ಜಗಳ ಮಾಡುತ್ತಿದ್ದೀರಿ ಎಂದು ವಿಚಾರಿಸಲಾಗಿ 3 ಜನ ಆರೋಫಿತರು ನನಗೆ ಕಲ್ಲಿನಿಂದ ಮತ್ತು

ಬಡಿಗೆಯಿಂದ ಬಲಗಾಲಿಗೆ, ಎರಡು ಬುಜಕ್ಕೆ, ಬೆನ್ನಿಗೆ ನನ್ನ ಹೆಡಕಿಗೆ ಹೊಡೆದಿರುತ್ತಾರೆ. ಆಗ ಚಾಸಾ-4 ಮತ್ತು 5ರವರು ಸದರಿ ಜಗಳವನ್ನು ಬಿಡಿಸಲು ಬಂದರು. ಚಾಸಾ-4 ಮತ್ತು 5ರವರಿಗೆ ಕಾಶೀಬಾಯಿ ಹಾಗೂ ಸಾವಿತ್ರಿರವರು ಹೊಡೆದರು. ನಂತರ ಚಾಸಾ-6 ಮತ್ತು 7ರವರು ಸದರಿ ಜಗಳವನ್ನು ಬಿಡಿಸಿದರು. ನಮಗೆ ಗಾಯ ಪೇಟ್ಟುಗಾಳಾಗಿದ್ದರಿಂದ ವಿಜಯಪುರದ ಆಸ್ಪತ್ರೆಗೆ ಹೋದೇವು. ನಂತರ ಸದರಿ ಆಸ್ಪತ್ರೆಯಲ್ಲಿ ಪೊಲೀಸರು ನಮ್ಮ ಹೇಳಿಕೆ ದೂರನ್ನು ಪಡೆದರು.

ಸದರಿ ಜಗಳದಲ್ಲಿ ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿರುವುದಿಲ್ಲ. ಸಾಕ್ಷಿಯು ಪಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ನಿಪಿ-2 ಹಾಗೂ ಸಾಕ್ಷಿಯ ಸಹಿಯ್ನನು ನಿಪಿ-2ಎ ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಎರಡು ಕಲ್ಲುಗಳನ್ನು ನೋಡಿ ಸಲಅಕ್ಷಿ ಆರೋಫಿತರು ಈ ಕಲ್ಲುಗಳಿಂದ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಸಾಕ್ಷಿಯು ಸದರಿ ಕಲ್ಲುಗಳನ್ನು ಗುರುತಿಸಿದ್ದರಿಂದ ಸದರಿ ಕಲ್ಲುಗಳನ್ನು ಮು.ಮಾ. 1 ಮತ್ತು 2 ಎಂದು ಗುರುತಿಸಲಾಯಿತು.

**ಸಹಾಯಕ ಸರ್ಕಾರಿ ಅಭೀಯೊಜಕರು ಮುಂದುವರೆದು ಮುಖ್ಯವಿಚಾರಣೆಗೆ ಕಾಲಾವಕಾಶ ಕೊರಿದ್ದರಿಂದ ಕಾಲಾವಕಾಶ ನೀಡಿ ಮುಖ್ಯ ವಿಚಾರಣೆಯನ್ನು ಮುಂದೊಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ವ
ಜೆ.ಎಮ್.ಎಫ್.ಸಿ. ಬಸವನ ಬಾಗೇವಾಡಿ.